Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO world Rankings

ಸಂಖ್ಯೆ:ಕುವಿ:ಎಸಿ-5: 1988 . :2020-21

ದಿನಾಂಕ:21-09-2020

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ವಿವಿಧ ಸ್ನಾತಕ ಪದವಿಗಳ ಪ್ರವೇಶಾತಿ ಕುರಿತು.

ಉಲ್ಲೇಖ:
1. ಅಧಿಸೂಚನೆ ಸಂಖ್ಯೆ:ಕುವಿ:ಎಸಿ-1:ಬಿ.ಸಿ.ಎ.(9)/2407/2005-06, ದಿನಾಂಕ:01-08-2005.
2. ಸುತ್ತೋಲೆ ಸಂಖ್ಯೆ:ಕುವಿ:ಎಸಿ-1/2516/2010-11, ದಿನಾಂಕ:04-08-2010.
3. ಅಧಿಸೂಚನೆ ಸಂಖ್ಯೆ:ಕುವಿ:ಶೈವಿ-1:825/2011-12, ದಿನಾಂಕ:28-07-2011.
4. ಸುತ್ತೋಲೆ ಸಂಖ್ಯೆ:ಕುವಿ:ಎಸಿ-5/572/2019-20, ದಿನಾಂಕ:03-05-2019.
5. ಸುತ್ತೋಲೆ ಸಂಖ್ಯೆ:ಕುವಿ:ಎಸಿ-5/2367/2019-20, ದಿನಾಂಕ:27-06-2019.
6. ಸುತ್ತೋಲೆ ಸಂಖ್ಯೆ:ಕುವಿ:ಎಸಿ-5/846/2020-21, ದಿನಾಂಕ:17-07-2020.
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15-09-2020.

—*****—

ವಿಶ್ವವಿದ್ಯಾಲಯದ ಸಂಯೋಜಿತ ಹಾಗೂ ಘಟಕ ಕಾಲೇಜುಗಳಲ್ಲಿ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ಉಲ್ಲೇಖ (1) ರಿಂದ (6)ರ ವರೆಗಿನ ವಿಶ್ವವಿದ್ಯಾಲಯದ ಸುತ್ತೋಲೆ ಮತ್ತು ಆದೇಶಗಳಲ್ಲಿ ಪ್ರವೇಶ ಅರ್ಹತೆಯ ನಿಯಮಗಳನ್ನು ಈಗಾಗಲೇ ಕಾಲೇಜುಗಳಿಗೆ ಒದಗಿಸಲಾಗಿದ್ದು, ಅದರಂತೆ ಕ್ರಮಕೈಗೊಳ್ಳಲು ಈ ಮೂಲಕ ತಿಳಿಸುತ್ತಾ, **2020-21ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ವರ್ಷದ ವಿವಿಧ ಸ್ನಾತಕ ಪದವಿಗಳ ಪ್ರವೇಶಾತಿಯನ್ನು ದಿನಾಂಕ:21-09-2020 ರಿಂದ ಪ್ರಾರಂಭಿಸಲು ಸೂಚಿಸಲಾಗಿದೆ.**

1. ಸ್ನಾತಕ ಪ್ರಥಮ ವರ್ಷದ ಪದವಿ ಪ್ರವೇಶಕ್ಕೆ ಪಿ.ಯು.ಸಿ. ಅಥವಾ 10+2 ಗೆ ಸಮಾನವಾದ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳ ಜೊತೆಗೆ ಎಸ್.ಎಸ್.ಎಲ್.ಸಿ. ನಂತರದ **ಎರಡು ವರ್ಷಗಳ** ಜೆ.ಓ.ಸಿ. ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಎಸ್.ಎಸ್.ಎಲ್.ಸಿ. ನಂತರ ಸರ್ಕಾರದಿಂದ ಮಾನ್ಯತೆ ಪಡೆದ **ಎರಡು ವರ್ಷಗಳ** ಐ.ಟಿ.ಐ. ನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲು ಉಲ್ಲೇಖ (3)ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅದನ್ನು ಅನುಸರಿಸುವುದು.
2. ಸ್ನಾತಕ ಪದವಿಯ ವಿನಿಯಮದಲ್ಲಿ ಡಿಪ್ಲೋಮಾ ಕೋರ್ಸ್ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶಾತಿ ನೀಡುವ ಬಗ್ಗೆ ಉಲ್ಲೇಖ-04ರ ಸುತ್ತೋಲೆಯನ್ನು ಹಾಗೂ ಮಾಹಿತಿಗಳನ್ನು ಒದಗಿಸಲಾಗಿದ್ದು, ಅದರಂತೆ ಪ್ರವೇಶ ನೀಡಲು ಕ್ರಮ ಕೈಗೊಳ್ಳುವುದು.
3. ಕೋವಿಡ್-19 (ಕೊರೊನಾ ವೈರಸ್) ನಿಯಂತ್ರಿಸುವ ಪ್ರಯುಕ್ತ ವಿದ್ಯಾರ್ಥಿಗಳು / ಪೋಷಕರು ಪ್ರವೇಶಾತಿ ಸಂದರ್ಭದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಮತ್ತು ಸಾನಿಟೈಸರ್ ಕಡ್ಡಾಯವಾಗಿ ಬಳಸುವ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.
4. 2020-21ನೇ ಶೈಕ್ಷಣಿಕ ಸಾಲಿನ ಪ್ರವೇಶ ಶುಲ್ಕವನ್ನು ಈಗಾಗಲೇ ಪರಿಚಲಿಸಲಾಗಿದೆ.
5. 2020-21ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯನ್ನು ನಂತರದಲ್ಲಿ ಪರಿಚಲಿಸಲಾಗುವುದು.
6. **ಅಂತರ್ ವಿಶ್ವವಿದ್ಯಾಲಯದ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳು ಎಲ್ಲಾ ಸೆಮಿಸ್ಟರ್‌ನ ಅಂಕಪಟ್ಟಿಗಳನ್ನು ಸಲ್ಲಿಸಿದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.**
7. 2020-21ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿಗಳ ಪ್ರವೇಶಕ್ಕೆ ದಂಡ ಶುಲ್ಕವಿಲ್ಲದೆ ಕಡೆಯ ದಿನಾಂಕ:30-09-2020.
8. 2020-21ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿಗಳ ಪ್ರವೇಶಕ್ಕೆ ರೂ.500/- ಗಳ ದಂಡ ಶುಲ್ಕದೊಂದಿಗೆ ಕಡೆಯ ದಿನಾಂಕ:15-10-2020.

--2

9. ಸ್ನಾತಕ ಪದವಿ ವಿನಿಯಮದ ಪ್ರಕಾರ 3ನೇ ಸೆಮಿಸ್ಟರ್‌ಗೆ ಪ್ರವೇಶವನ್ನು ಹೊಂದಲು 01 ನೇ ಸೆಮಿಸ್ಟರ್‌ನ ಒಟ್ಟು ವಿಷಯಗಳಲ್ಲಿ 40 % ರಷ್ಟು ಹಾಗೂ 05ನೇ ಸೆಮಿಸ್ಟರ್ ಪ್ರವೇಶಕ್ಕೆ 01, 02 ಮತ್ತು 03 ನೇ ಸೆಮಿಸ್ಟರ್‌ಗಳ ಒಟ್ಟು ವಿಷಯಗಳಲ್ಲಿ 40 % ರಷ್ಟು ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.

ಮೇಲಿನಂತೆ ನಿಯಮಗಳನ್ವಯ ಪ್ರಾಂಶುಪಾಲರೇ ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಕ್ರಮ ಕೈಗೊಳ್ಳುವುದು.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

(ಡಾ. ಧರಣಿ ಕುಮಾರ್ ಪಿ.)
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451.
ಶಿವಮೊಗ್ಗ ಜಿಲ್ಲೆ.

21/9/2020

ಗೆ,

ಪ್ರಾಂಶುಪಾಲರು, ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸಂಯೋಜಿತ : ನೇರ : ಘಟಕ ಸ್ನಾತಕ ಪದವಿ ಕಾಲೇಜುಗಳು.

**ಪ್ರತಿಗಳು:**

1. ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
3. ಕಛೇರಿ ಪ್ರತಿ.